ರಾಜ್ಯೋತ್ಸವ ಪ್ರಶಸ್ತಿಗಳು

೧೬೪. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪಡೆದ ಜನರ ಸಂಖ್ಯೆ ಎಷ್ಟು ಹಾಗೂ ಯಾವ ಯಾವ ವ್ಯಕ್ತಿಗಳಿಗೆ ನೀಡಲಾಗಿದೆ.

ಆ) ರಾಜ್ಯೋತ್ಸವ ಪ್ರಶಸ್ತಿಗಳನ್ನು ಯಾವ ಯಾವ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವುದಕ್ಕಾಗಿ ಇವರಿಗೆ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಲಾಗಿದೆ, (ಪ್ರತಿಯೊಬ್ಬರ ವಿವರಗಳನ್ನು ಒದಗಿಸುವುದು)

ಇ) ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದವರಿಗೂ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಿದೆಯೇ,

ಈ) ನೀಡಿಲ್ಲದಿದ್ದಲ್ಲಿ, ಮುಂಬರುವ ವರ್ಷಗಳಲ್ಲಿ ರಂಗಭೂಮಿ ಕಲಾವಿದರಿಗೂ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ.

ಉ) ರಾಜ್ಯೋತ್ಸವ ಪ್ರಶಸ್ತಿಗಳನ್ನು ಇಂತಿಷ್ಟೇ ಜನರಿಗೆ ನೀಡಬೇಕೆಂಬ ಮಿತಿಯಿದೆಯೇ ?

ಊ) ಇಲ್ಲದಿದ್ದರೆ ಈ ಬಗ್ಗೆ ಸರ್ಕಾರ ಮಿತಿಯನ್ನು ವಿಧಿಸಂತ್ತದೆಯೇ ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)—

ಅ) ಓದಿ. ಅವರ ಪಟ್ಟಿಯನ್ನು ಲಗತ್ತಿಸಿದೆ (ಅನುಬಂಧ–೧)

ಆ) ಅನುಬಂಧ ೧ರಲ್ಲಿಯೇ ನೀಡಲಾಗಿದೆ.

ಇ) ನೀಡಿದೆ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ.

ಊ) ಮಿತಿಯನ್ನು ವಿಧಿಸುವ ವಿಚಾರವಿಲ್ಲ.

ಅನುಬಂಧ–೧

೧೯೯೦ನೇ ಸಾಲಿನ ರಾಜ್ಯ ಪ್ರಶಸ್ತಿ (ರಾಜ್ಯೋತ್ಸವ ಪ್ರಶಸ್ತಿ) ವಿಜೇತರು :

ಸಾಹಿತ್ಯ :

೧.	ಶ್ರೀ ಎನ್. ಕೆ. ಕುಲಕರ್ಣಿ	ಧಾರವಾಡ
೨.	ಡಾ. ರಾ. ಯಂ. ಧಾರವಾಡಕರ	ಧಾರವಾಡ
೩.	ಶ್ರೀಮತಿ ಟಿ. ಸುನಂದಮ್ಮ	ಬೆಂಗಳೂರು
೪.	ಶ್ರೀ ಮಳಲಿ ವಸಂತಕುಮಾರ್	ಮೈಸೂರು
೫.	ಪ್ರೊ. ಎಲ್.ಎಸ್. ಶೇಷಗಿರಿರಾವ್	ಬೆಂಗಳೂರು.

ಸಂಗೀತ ಮತ್ತು ನೃತ್ಯ :

೬.	ಶ್ರೀ ರಾಮಣ್ಣ ಫಕೀರಪ್ಪ ಭಜಂತ್ರಿ	ಧಾರವಾಡ
೭.	ವಿದ್ವಾನ್ ಎ. ವಿ. ನಾರಾಯಣಪ್ಪ	ಬೆಂಗಳೂರು
೮.	ಪಂಡಿತ ವಿನಾಯಕ ತೊರವಿ	ಬೆಂಗಳೂರು
೯.	ಶ್ರೀ ಎಂ. ಎಸ್. ನಟರಾಜನ್	ಬೆಂಗಳೂರು
೧೦.	ಶ್ರೀ ಪಿ. ವೆಂಕಟಪ್ಪ ದೋಗ್ರ ದೇವಾಡಿಗ	ಪುತ್ತೂರು ದಕ್ಷಿಣ ಕನ್ನಡ ಜಿಲ್ಲೆ
೧೧.	ಶ್ರೀ ವಸಂತ ಕನಕಾಪೂರ	ಧಾರವಾಡ
೧೨.	ಶ್ರೀ ಟಿ. ಕೆ. ದೇಸಾಯಿ	ಧಾರವಾಡ

ಜಾನಪದ ಮತ್ತು ಯಕ್ಷಗಾನ

೧೩.	ಶ್ರೀ ಶೇಣಿ ಗೋಪಾಲಕೃಷ್ಣ ಭಟ್	(ಕಾಸರಗೋಡು ಕೇರಳ ರಾಜ್ಯ)
೧೪.	ಶ್ರೀ ಗೋವಿಂದ ಮುಕ್ಕಂದ ನಾಯ್ಕ	ಕುಮಟಾ, ಉ. ಕ. ಜಿಲ್ಲೆ
೧೫.	ಶ್ರೀ ಜಿ. ಆರ್. ಕಾಳಿಂಗ ನಾವುಡ (ಮರಣೋತ್ತರ)	ಸಾಲಿಗ್ರಾಮ, ದ. ಕ. ಜಿಲ್ಲೆ
೧೬.	ಶ್ರೀ ಸಿಂಪಿ ಲಿಂಗಣ್ಣ	ಚಡಚಣ ಬಿಜಾಪುರ ಜಿಲ್ಲೆ
೧೭.	ಶ್ರೀ ಕಂಸಾಳೆ ಮಹದೇವಯ್ಯ	ಮೈಸೂರು
೧೮.	ಶ್ರೀ ಹಮ್ಮಿಗಿ ಮುದಿಮಲ್ಲಪ್ಪ	ಸೊನ್ನ ಬಳ್ಳಾರಿ ಜಿಲ್ಲೆ
೧೯.	ಶ್ರೀ ಪಟೇಲ ಕೆಂಪೆಗೌಡ	ತುಮಕೂರು
೨೦.	ಶ್ರೀ ಹೊಂಬಯ್ಯ	ಭವನಹಳ್ಳಿ ಮಂಡ್ಯ ಜಿಲ್ಲೆ

ಲಲಿತ ಕಲೆ

೨೧.	ಪಿ. ಬಾಲನ್	ಬೆಂಗಳೂರು
೨೨.	ಶ್ರೀ ಹೆಚ್. ಜಿ. ಬಸವಣ್ಣಾಚಾರ್	ಮೈಸೂರು
೨೩.	ಶ್ರೀ ಕೃಷ್ಣ ಶ್ರೀನಿವಾಸ ಪೋತದಾರ	ಬೆಂಗಳೂರು

ಚಲನ ಚಿತ್ರ

೨೪.	ಶ್ರೀ ಎನ್. ಲಕ್ಷ್ಮೀನಾರಾಯಣ,	ಬೆಂಗಳೂರು
೨೫.	ಶ್ರೀಮತಿ ಅರುಣರಾಜೆ ಪಾಟೀಲ,	ಮುಂಬಯಿ
೨೬.	ಶ್ರೀ ವಿಷ್ಣುವರ್ಧನ್,	ಬೆಂಗಳೂರು
೨೭.	ಶ್ರೀ ಅಂಬರೀಶ್,	ಬೆಂಗಳೂರು
೨೮.	ಶ್ರೀ ಶಂಕರ್‌ನಾಗ್,	ಬೆಂಗಳೂರು (ಮರಣೋತ್ತರ)

ಶಿಕ್ಷಣ

೨೯. ಡಾ. ಎಸ್. ಎಸ್. ಗುರುಮೂರ್ತಿ, ಬೆಂಗಳೂರು
೩೦. ಪ್ರೊ. ಚಿ. ನ. ಮಂಗಳಾ, ಬೆಂಗಳೂರು
೩೧. ಡಾ. ಕೆ. ಹನುಮಂತಪ್ಪ, ಬೆಂಗಳೂರು
೩೨. ಡಾ. ಟಿ. ಕೆ. ಮೇಟಿ, ಧಾರವಾಡ
೩೩. ಡಾ. ಬಿ. ಎಸ್. ಗಾಯಿ, ಮೈಸೂರು

ಪತ್ರಿಕೋದ್ಯಮ

೩೪. ಶ್ರೀ ಕೆ. ಶಾಮರಾವ್, ಬೆಂಗಳೂರು
೩೫. ಶ್ರೀ ಎನ್. ವಿ. ಜಯಶೀಲರಾವ್, ಬೆಂಗಳೂರು
೩೬. ಶ್ರೀ ಪಿ. ರಾಮಯ್ಯ, ಬೆಂಗಳೂರು
೩೭. ಶ್ರೀ ಸಂತೋಷಕುಮಾರ ಗುಲ್ವಾಡಿ, ವಾಣಿಪಾಲ್ ದ. ಕ. ಜಿಲ್ಲೆ
೩೮. ಶ್ರೀ ಐ. ಕೆ. ಜಾಗೀರ್‌ದಾರ, ಬೆಂಗಳೂರು
೩೯. ಶ್ರೀ ರಾಜ್ ಇಮ್ತಿಯಾಜ್, ಬೆಂಗಳೂರು
೪೦ ಶ್ರೀ ಎಂ. ಎಸ್. ಟೋಪಣ್ಣವರ, (ಮರಣೋತ್ತರ) ಬೆಳಗಾಂ

ವೈದ್ಯಕೀಯ

೪೧ ಡಾ॥ ಸುಲೋಚನ ಗುಣಶೀಲ, ಬೆಂಗಳೂರು
೪೨ ಡಾ॥ ಚಿಕ್ಕನಂಜಪ್ಪ, ಬೆಂಗಳೂರು
೪೩ ಡಾ॥ ಜಿ. ಎಂ. ಜಯರಾಂ, ಬೆಂಗಳೂರು
೪೪ ಡಾ॥ ಎಂ. ಗಂಗಪ್ಪ, ಬೆಂಗಳೂರು

ಪಶುವೈದ್ಯ

೪೫ ಡಾ॥ ಎಸ್. ಅಬ್ದುಲ್ ರಹಮಾನ್, ಬೆಂಗಳೂರು

ಸಮಾಜಶಾಸ್ತ್ರ:

೪೬ ಡಾ॥ಸಿ.ಪಾರ್ವತಮ್ಮ, ಮೈಸೂರು

ಸಹಕಾರ:

೪೭ ಶ್ರೀ ಎಂ.ಎಂ. ಪಾಟೀಲ, ಧಾರವಾಡ
೪೮ ಶ್ರೀ ಎಸ್.ಕೆ. ಅಮೀನ, ಮಂಗಳೂರು

ರಾಜ್ಯಶಾಸ್ತ್ರ:

೪೯ ಡಾ॥ ವಿ.ಎಂ.ರಾಜಶೇಖರಯ್ಯ, ಧಾರವಾಡ.

ಸಮಾಜಸೇವೆ :

೫೦ ಡಾ॥ ಶಿವಕುಮಾರಸ್ವಾಮಿ, ತುಮಕೂರು
೫೧ ಶ್ರೀ .ಗುರಪ್ಪ ಮಲಪ್ಪಗೌರ್, ಬಾಗಲಕೋಟೆ,ಬಿಜಾಪುರ ಜಿಲ್ಲೆ
೫೨ ಶ್ರೀ ಜಿ.ಎಂ ಪಾಟೀಲ, ಧಾರವಾಡ
೫೩ ಶ್ರೀ .ಎಸ್.ವಿ.ಮಂಜುನಾಥ, ಬೆಂಗಳೂರು
೫೪ ಶ್ರೀ ಪಂಚಶೀಲ ಗವಾಯಿ, ದಾಶೀನಾಥ, ಬೀದರ್
೫೫ ಶ್ರೀ ಶಂಕರ ಪ್ರಸಾದ ವಿಶ್ವನಾಥ ಅಗ್ನಿಹೋತ್ರಿ, ಧಾರವಾಡ
೫೬ ಶ್ರೀ ಹೆಚ್. ಎಂ. ಶಿವಣ್ಣ, ಹಾಸನ
೫೭ ಶ್ರೀ ಇಸ್ಮಾಯಿಲ್ ಸುಲ್ತಾನ್ ಗಡ್ಡೆಕಾರ್, ಬೆಳಗಾಂ
೫೮ ಶ್ರೀ ಆರ್. ಎಂ. ವಿ. ಆರಾಧ್ಯ, ಬೆಂಗಳೂರು
೫೯ ಶ್ರೀ ಹೆಚ್. ಎಸ್. ರಾಮಕೃಷ್ಣಯ್ಯ, ಹೊಳೆನರಸೀಪುರ ಹಾಸನ ಜಿಲ್ಲೆ
೬೦ ಶ್ರೀಮತಿ ನೀಲವ್ವ ಚನ್ನಪ್ಪ ಭದ್ರಾಪುರ ಧಾರವಾಡ

ಕೃಷಿ

೬೧ ಶ್ರೀ ಬಿ. ಶಿವಶಂಕರ, ಬೆಂಗಳೂರು
೬೨ ಡಾ. ಎನ್. ಪಿ. ಪಾಟೀಲ್, ಬೆಂಗಳೂರು

ಕ್ರೀಡೆ

೬೩ ಶ್ರೀ ಬಿ. ಸತ್ಯಾಜಿರಾವ್, ಬೆಂಗಳೂರು
೬೪ ಶ್ರೀಮತಿ ಅಶ್ವಿನಿ ನಾಚಪ್ಪ , ಬೆಂಗಳೂರು

ಸಾಹಸ

೬೫ ಶ್ರೀ ನವಾಜ್‌ಸಾಬ್, ಗುಲ್ಬರ್ಗಾ
೬೬ ಶ್ರೀ ತುಕರಾಂ ಖಾರ್ದಿ, ಮಂಗಳೂರು

ರಂಗಭೂಮಿ

೬೭ ಶ್ರೀ ಚಿಂದೋಡಿ ಕರಿಬಸವರಾಜ್, ಬೆಂಗಳೂರು

ಕರ್ನಾಟಕ ಸರ್ಕಾರದ ದಿನಗೂಲಿ ನೌಕರರ ಸೇವೆ ಖಾಯಂ

(೫೭) ಶ್ರೀ ಎ.ಟಿ. ರಾಮಸ್ವಾಮಿ (ಆರಕಲಗೂಡು) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು, (ಇಲಾಖೆವಾರು ಮಾಹಿತಿಯನ್ನೊದಗಿಸುವುದು) ?

ಆ) ದಿನಾಂಕ ೨೩-೧೨-೧೯೯೦ ರಂದು ಸರ್ವೋಚ್ಚ ನ್ಯಾಯಾಲಯವು ದಿನಗೂಲಿ ನೌಕರರ ಖಾಯಂ ಬಗ್ಗೆ ಕೊಟ್ಟಿರುವ ತೀರ್ಪನ್ನು ಕಾರ್ಯಗತಗೊಳಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಇ) ದಿನಗೂಲಿ ನೌಕರರನ್ನು ಖಾಯಂ ಮಾಡಲು ಸರ್ಕಾರವು ಕ್ರಮ ಕೈಗೊಂಡಿರುವುದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು).—

ಅ) ೫೯,೭೭೭. ಇಲಾಖಾವಾರು ಮಾಹಿತಿಯನ್ನೊದಗಿಸುವ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಕ್ರಮಬದ್ಧಗೊಳಿಸುವ ಬಗ್ಗೆ ಸರ್ವೋನ್ನತ ನ್ಯಾಯಾಲಯವು ದಿನಾಂಕ ೨೩-೧೨-೧೯೯೦ರಂದು ಹೊರಡಿಸಿರುವ ಆದೇಶಾನುಸಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ೧-೨-೮೮ರ ಹಿಂದೆ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರಿಗೆ ಅನ್ವಯಿಸಲು ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ ೨ ಎಸ್‌ಎಲ್‌ಸಿ ೯೦ ದಿನಾಂಕ ೬-೮-೯೦ ರಂದು ಹೊರಡಿಸಲಾಗಿದೆ.

ಇ) ಕ್ರಮ ತೆಗೆದುಕೊಳ್ಳಲಾಗುತ್ತಿದೆ.